# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಎಂ.ಎ.ಗೋಪಾಲಸ್ವಾಮಿ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 122 |
| ಉತ್ತರಿಸಬೇಕಾದ ದಿನಾಂಕ | : | 08.12.2020 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇದರ ಅಧೀನದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಸಾಲ ವಿತರಣೆ ಮಾಡುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಪಾಲನೆ ಮಾಡದೆ ತಾರತಮ್ಯ ನೀತಿ ಅನುಸರಿಸುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ಪ್ರಕರಣವಾರು ಮಾಹಿತಿ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br>ಆದರೆ, ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನೀಡಿರುವ ವರದಿಯನ್ವಯ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಸಾಲ ವಿತರಣೆ ಮಾಡುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುತ್ತಿವೆ. ಚನ್ನರಾಯಪಟ್ಟಣ ತಾಲ್ಲೂಕಿನ ಸಾತೇನಹಳ್ಳಿ ಪ್ಯಾಕ್ಸ್‌ನಲ್ಲಿ ರಂಗೇಗೌಡ ಬಿನ್ ಚಿಕ್ಕದ್ಯಾವೇಗೌಡ ತರಬೀಕನಹಳ್ಳಿ, ಮಳಲೀಗೌಡ ಬಿನ್ ಕೃಷ್ಣೇಗೌಡ ತರಬೀಕನಹಳ್ಳಿ, ಮತ್ತು ಮಾಳಿಗೇಗೌಡ ಉರುಫ್ ಜಯರಾಮು ಬಿನ್ ಚಿಕ್ಕೇಗೌಡ ಇವರುಗಳಿಗೆ ಸಾಲ ನೀಡುವ ಸಂದರ್ಭದಲ್ಲಿ ಬೇರೆ ಬ್ಯಾಂಕಿನ ಬೇಬಾಕಿ ಪತ್ರ (ಎಸ್.ಬಿ.ಐ ಬ್ಯಾಂಕು) ನೀಡಿರುವುದಿಲ್ಲ. ಹಾಗಾಗಿ ಇವರಿಗೆ ಸಾಲ ನೀಡಿರುವುದಿಲ್ಲ. ತದನಂತರ ಎಸ್.ಬಿ.ಐ ಬ್ಯಾಂಕಿನ ಬೇಬಾಕಿ ಪತ್ರ ನೀಡಿರುತ್ತಾರೆ. ಮುಂದಿನ ದಿನಗಳಲ್ಲಿ ಸಾಲ ನೀಡಲಾಗುವುದೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಾತೇನಹಳ್ಳಿ ಪ್ಯಾಕ್ಸ್ ಚನ್ನರಾಯಪಟ್ಟಣ ತಾಲ್ಲೂಕು ಇವರು ದೃಢೀಕರಣ ನೀಡಿದ್ದು, ಈ ಮೇಲಿನ ಒಂದು ಪ್ಯಾಕ್ಸ್ ಹೊರತುಪಡಿಸಿ ಜಿಲ್ಲೆಯಲ್ಲಿ ಇನ್ನಾವುದೇ ಪ್ಯಾಕ್ಸ್‌ಗಳಲ್ಲಿ ಸಾಲ ವಿತರಣೆಯಲ್ಲಿ ತಾರತಮ್ಯದ ಬಗ್ಗೆ ಸದಸ್ಯರಿಂದ ದೂರುಗಳು ಬಂದಿರುವುದಿಲ್ಲವೆಂದು ಹಾಗೂ ಬ್ಯಾಂಕಿನಲ್ಲಿ ಸಾಲ ವಿತರಣೆ ಮಾಡುವಾಗ ಯಾವುದೇ ತಾರತಮ್ಯ ಮಾಡಿರುವುದಿಲ್ಲ ಮತ್ತು ಅಂತಹ ಯಾವುದೇ ದೂರುಗಳು ಬ್ಯಾಂಕಿಗೆ ಸ್ವೀಕೃತಗೊಂಡಿರುವುದಿಲ್ಲವೆಂದು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ದೃಢೀಕರಣ ನೀಡಿರುತ್ತಾರೆ.<br>ಅದಾಗ್ಯೂ, ರೈತರಿಗೆ ಸಾಲ ಸೌಲಭ್ಯ ದೊರಕುವ ನಿಟ್ಟಿನಲ್ಲಿ ಯಾವುದೇ ತಾರತಮ್ಯ ನೀತಿ ಅನುಸರಿಸದೇ ಸಾಲ ವಿತರಿಸಲು ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಗಳಿಗೆ ನಿರ್ದೇಶನ ನೀಡಲಾಗಿದೆ ಪ್ರತಿ **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇದರ ಅಧೀನದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಯಾವ ಯಾವ ರೀತಿಯ ಸಾಲಗಳನ್ನು ರೈತರಿಗೆ ವಿತರಿಸಲಾಗುತ್ತಿದೆ; ಈ ಸಾಲಗಳನ್ನು ನೀಡಲು ಅನುಸರಿಸುತ್ತಿರುವ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ಇದರ ಅಧೀನದಲ್ಲಿರುವ ಪ್ಯಾಕ್ಸ್‌ಗಳ ಮೂಲಕ ರೈತರಿಗೆ ಈ ಕೆಳಕಂಡ ಸಾಲಗಳ ವಿತರಣೆ ಮಾಡುತ್ತಿದ್ದು, ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಸಾಲ ವಿತರಣೆ ಮಾಡಲಾಗುತ್ತಿದೆ.<br>1) **ಕುಟುಂಬಕ್ಕೆ ರೂ. 3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ಮತ್ತು ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳವಾಗಿ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದ ಸಾಲದ ಯೋಜನೆ** |

| | | |
|---|---|---|
| | ಮಾನದಂಡಗಳೇನು: ಸಾಲ ವಿತರಣೆಯಲ್ಲಿ ಆಗುತ್ತಿರುವ ತಾರತಮ್ಯ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | • ಈ ಯೋಜನೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ರೈತನು ಪಡೆದ ಬೆಳೆ ಸಾಲ/ಹೈನುಗಾರಿಕೆ/ಮೀನುಗಾರಿಕೆ ಸಾಲಗಳಿಗೆ ಅನ್ವಯವಾಗುತ್ತದೆ.<br>• ಈ ಯೋಜನೆಯು ಒಬ್ಬ ಫಲಾನುಭವಿಗೆ ಗರಿಷ್ಟ ರೂ.2.00 ಲಕ್ಷಗಳಿಗೆ ನೀಡಿದ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಒಂದು ಕುಟುಂಬಕ್ಕೆ ಬೆಳೆ ಸಾಲ, ಪಶುಸಂಗೋಪನೆ ಮತ್ತುಮೀನುಗಾರಿಕೆ ದುಡಿಯುವ ಬಂಡವಾಳದ ಸಾಲ ಒಟ್ಟು ಗೂಡಿಸಿ ರೂ.3 ಲಕ್ಷಗಳಿಗೆ ಮೀರತಕ್ಕದ್ದಲ್ಲ.<br>• ರೈತನು ರೂ.20000 ಗಳ ವೇತನ/ಪಿಂಚಣಿ ಪಡೆಯುತ್ತಿದ್ದರೆ ಅಥವಾ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಬಡ್ಡಿ ಸಹಾಯಧನ ಲಭಿಸುವುದಿಲ್ಲ.<br>• ಬಡ್ಡಿ ಸಹಾಯದನ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ ನಿಗದಿಪಡಿಸಿದ ಸ್ಕೇಲ್ ಆಫ್ ಪೈನಾನ್ಸ್ ಗೆ ಮಾತ್ರ ಲಭಿಸುತ್ತದೆ.<br>• ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮರುಪಾವತಿಸಬೇಕು.<br>**2) ಕುಟುಂಬಕ್ಕೆ 10.00 ಲಕ್ಷಗಳವರೆಗೆ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲಗಳನ್ನು ಶೇಕಡ 3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.**<br>• ಈ ಯೋಜನೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ರೈತನು ಪಡೆದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲಗಳಿಗೆ ಅನ್ವಯವಾಗುತ್ತದೆ.<br>• ನಬಾರ್ಡ್ ಗುರುತಿಸಿದ ಕೃಷಿ / ಕೃಷಿ ಸಂಬಂಧಿತ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಪೈಕಿ ಲಘು ನೀರಾವರಿ, ಭೂ ಅಭಿವೃದ್ಧಿ, ಕೃಷಿ ಯಾಂತ್ರೀಕರಣ, ಪ್ಲಾಂಟೇಷನ್ ಹಾಗೂ ತೋಟಗಾರಿಕೆ ಅಭಿವೃದ್ಧಿ, ಸಾವಯವ ಕೃಷಿ, ಪಶುಸಂಗೋಪನೆ ಹಾಗೂ ಹೈನುಗಾರಿಕೆ, ಮೀನು ಕೃಷಿ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ ಉದ್ದೇಶಗಳಿಗೆ ರೈತರಿಗೆ ನೀಡಲಾಗುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ.<br>• ದ್ವಿಚಕ್ರ ವಾಹನ, ಜೀಪು, ಪಿಕಪ್ ವ್ಯಾನ್ ಹಾಗೂ ಇನ್ನು ಮುಂತಾದ ಯಾವುದೇ ಕೃಷಿ ಸಾಗಾಣಿಕೆಗೆ ಬಳಸುವ ವಾಹನ ಸಾಲಗಳಿಗೆ, ತೋಟದ ಮನೆ, ಗ್ರಾಮೀಣ ಗೋದಾಮು ಗಳಿಗೆ, ದ್ವಿತೀಯ ಸಂಸ್ಕರಣೆ, ಕೃಷಿ ಉತ್ಪನ್ನಗಳ ಮೌಲ್ಯ ವರ್ಧನೆ/ಆಹಾರ ಸಂಸ್ಕರಣೆ, ಕೃಷಿ ಕ್ಲಿನಿಕ್‌ಗೆ ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.<br>• ಈ ಯೋಜನೆಯು ಒಂದು ಕುಟುಂಬಕ್ಕೆ ರೂ.10 ಲಕ್ಷಗಳ ವರೆಗಿನ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. |

| | | |
|---|---|---|
| | • ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮತ್ತು ಶೇ.3 ರ ಬಡ್ಡಿ ದರದಲ್ಲಿ ಮರುಪಾವತಿಸಬೇಕು.<br><br>ಸಾಲ ವಿತರಣೆಯಲ್ಲಿ ಬ್ಯಾಂಕಿನಲ್ಲಿ ಯಾವುದೇ ತಾರತಮ್ಯ ಮಾಡಿರುವುದಿಲ್ಲ. |
| ಇ) | ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇದರ ಅಧೀನದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಳೆದ 3 ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ವಿತರಣೆ ಮಾಡಿರುವ ಸಾಲದ ವಿವರಗಳನ್ನು ನೀಡುವುದು: (ತಾಲ್ಲೂಕುವಾರು, ಹೋಬಳಿವಾರು ಮಾಹಿತಿ ನೀಡುವುದು) | ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇದರ ಅಧೀನದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಳೆದ 3 ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ವಿತರಣೆ ಮಾಡಿರುವ ಸಾಲದ ಮೊತ್ತದ ತಾಲ್ಲೂಕುವಾರು, ಹೊಬಳಿವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | ಚನ್ನರಾಯಪಟ್ಟಣ ತಾಲ್ಲೂಕಿನ ಕಬ್ಬಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸಾಲ ವಿತರಣೆ ಮಾಡದಿರಲು ಕಾರಣಗಳೇನು: ಈ ಸಂಘಕ್ಕೆ ಸಾಲ ವಿತರಣೆ ಮಾಡಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ವಿವಿಧ ಯೋಜನೆಗಳಡಿ ವಿತರಣೆ ಮಾಡಿರುವ ಸಾಲದ ವಿವರಗಳೇನು? | ಚನ್ನರಾಯಪಟ್ಟಣ ತಾಲ್ಲೂಕಿನ ಕಬ್ಬಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ತಹಲ್‌ವರೆಗೆ ಯಾವುದೇ ರೀತಿಯ ಸಾಲದ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲವೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಹಾಸನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಇವರು ವರದಿಸಿರುತ್ತಾರೆ. ಕಳೆದ 3 ವರ್ಷಗಳಲ್ಲಿ ಸಂಘದಿಂದ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದ ಕಾರಣ ಸಾಲ ವಿತರಣೆ ಮಾಡಿರುವುದಿಲ್ಲ. ಅರ್ಜಿಗಳು ಸ್ವೀಕೃತವಾದಲ್ಲಿ ಸಾಲ ವಿತರಿಸಲಾಗುವುದು. |

**ಸಂಖ್ಯೆ: ಸಿಒ 387 ಸಿಎಲ್‌ಎಸ್ 2020**

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ - 1

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52 ದೂ.22256146**

ಸಂಖ್ಯೆ ಸಿಆರ್‌ಡಿ/ಸಿಎಚ-1/2/2020-21 ದಿನಾಂಕ 14-09-2020

**'ಸುತ್ತೋಲೆ'**

ವಿಷಯ :- 2020-21 ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ನಿವ್ವಳ ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲ ನೀಡುವ ಬಗ್ಗೆ

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ ಸಿಒ 201 ಸಿಎಲ್‌ಎಸ್ 2020, ಬೆಂಗಳೂರು, ದಿ.05.09.2020
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿಆರ್‌ಡಿ/ಸಿಎಚ-1/3/2020-21 ದಿನಾಂಕ: 22-5-2020
3. ದಿ.25-8-2020 ರಂದು ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು
4. ನಬಾರ್ಡ್ ಸುತ್ತೋಲೆ ಸಂಖ್ಯೆ 73/ಪುನರ್ಧನ-12/2020 ದಿ.30-3-2020
5. ನಬಾರ್ಡ್ ಸುತ್ತೋಲೆ ಸಂಖ್ಯೆ 188/ಪುನರ್ಧನ-63/2020 ದಿ.8-8-2020

##

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, 2020-21 ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ರೂ.3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲ ನೀಡುವ ಬಗ್ಗೆ ಉಲ್ಲೇಖ 1 ರಲ್ಲಿ ಸರ್ಕಾರ ಆದೇಶ ಹೊರಡಿಸಿದ್ದು, ಅದರ ಪ್ರತಿಯನ್ನು ಈ ಪತ್ರಕ್ಕೆ ಅನುಬಂಧ-1 ರಲ್ಲಿ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಸರ್ಕಾರದ ಆದೇಶದನ್ವಯ ಎಲ್ಲಾ ಅವಶ್ಯಕ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಲು ನಿರ್ದೇಶಿಸಲಾಗಿದೆ. ಸರ್ಕಾರದ ಆದೇಶವನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು ಹಾಗೂ ಎಲ್ಲ ವರ್ಗದ ಸದಸ್ಯರಿಗೆ ಮುಖ್ಯವಾಗಿ ಪ.ಜಾತಿ/ಪಂಗಡದ ರೈತ ಸದಸ್ಯರಿಗೆ ಸಾಲದ ಅರ್ಜಿಗಳನ್ನು ಸುಲಭವಾಗಿ ದೊರೆಯುವಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸಾಲದ ಅರ್ಜಿಗಳನ್ನು ಸ್ವೀಕರಿಸಿದ ಮತ್ತು ಸಾಲ ಮಂಜೂರಾದ ವಿವರಗಳನ್ನು ನಮೂದಿಸಲು ಪ್ರತ್ಯೇಕ ರಿಜಿಸ್ಟರ್‌ನ್ನು ಸಂಘಗಳ ಮಟ್ಟದಲ್ಲಿ ನಿರ್ವಹಿಸತಕ್ಕದ್ದು.

ಉಲ್ಲೇಖ 2 ರಲ್ಲಿ ಈಗಾಗಲೇ 24.50 ಲಕ್ಷ ರೈತರಿಗೆ ರೂ.14500 ಕೋಟಿಗಳ ಬೆಳೆ ಸಾಲ ವಿತರಿಸಲು ಜಿಲ್ಲಾವಾರು ಗುರಿ ನಿಗದಿಪಡಿಸಿದ್ದು, ಉಲ್ಲೇಖ 3 ರ ಸಭೆಯಲ್ಲಿ ಸೂಚಿಸಿದಂತೆ ವಿಧಾನ ಸಭಾ ಕ್ಷೇತ್ರಗಳಿಗೆ ಯಾವುದೇ ತಾರತಮ್ಯ ಮಾಡದೇ ಪ್ರತೀ ವಿಧಾನ ಸಭಾ ಕ್ಷೇತ್ರ ಹಾಗೂ ಸಂಘಗಳಿಗೆ ಸಾಲ ವಿತರಿಸಲು ಕೂಡಲೇ ಗುರಿಯನ್ನು ನಿಗದಿಪಡಿಸಿ ಅದರನ್ವಯ ಸಾಲ ವಿತರಣೆಯನ್ನು ಕೈಗೊಳ್ಳಲು ಸೂಚಿಸಲಾಗಿದೆ.

ಪ್ರತೀ ಡಿಸಿಸಿ ಬ್ಯಾಂಕ್ ಒಟ್ಟಾರೆ ಸದಸ್ಯರು, ಹೊಸ ಸದಸ್ಯರು ಮತ್ತು ಪ.ಜಾತಿ/ಪ.ಪಂಗಡದ ಸದಸ್ಯರಿಗೆ ಮಾಹೆವಾರು ಗುರಿ ನಿಗದಿಪಡಿಸಿಕೊಂಡು ಅಪೆಕ್ಸ್ ಬ್ಯಾಂಕಿನ ಮೂಲಕ ದಿ.20-9-2020 ರೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಅದೇ ರೀತಿ ಉಲ್ಲೇಖ 4 ರ ನಬಾರ್ಡ್ ಸುತ್ತೋಲೆಯಲ್ಲಿ ಕೇಂದ್ರ ಸರ್ಕಾರದ ಶೇ.2 ಬಡ್ಡಿ ಸಬ್ ವೆನ್ಷನ್ ಮತ್ತು ಶೇ.3 ರ ಪ್ರೋತ್ಸಾಹಧನ ಪಡೆಯಲು ಕೆಸಿಸಿ ಖಾತೆಯ ಮೂಲಕವೇ ಸಾಲ ವಿತರಿಸಲು ಸೂಚಿಸಿದ್ದು, ರಾಜ್ಯ ಸರ್ಕಾರದ ಆದೇಶದಲ್ಲಿಯೂ ಸಹ ಸಂಘಗಳು ತಮ್ಮ ಹಂತದಲ್ಲಿ ನಗದು ಮೂಲಕ ಸಾಲ ವಿತರಿಸುವುದನ್ನು ನಿರ್ಬಂದಿಸಿದ್ದು, ಡಿಸಿಸಿ ಬ್ಯಾಂಕ್ ಅಥವಾ ಇತರೇ ವಾಣಿಜ್ಯ ಬ್ಯಾಂಕಿನಲ್ಲಿ ರೈತರು ಹೊಂದಿರುವ ಉಳಿತಾಯ ಖಾತೆಗಳ ಮೂಲಕವೇ (ರುಪೇ ಕಾರ್ಡ್) ಸಾಲ ವಿತರಿಸಲು ಸೂಚಿಸಿದ್ದು, ಅದರನ್ವಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಡಿಸಿಸಿ ಬ್ಯಾಂಕುಗಳು ಇದಕ್ಕಾಗಿ ನಬಾರ್ಡ್ ರುಪೇ ಕಾರ್ಡ್ ವಿತರಿಸುವಾಗ ಸೂಚಿಸಿದ ಸಾಲ ವಿತರಣೆಯ ಮೂರು ಮಾಡೆಲ್ ಗಳಲ್ಲಿ ಒಂದು ಮಾಡೆಲ್ ಅಳವಡಿಸಿಕೊಂಡು ಸಾಲ ವಿತರಣೆಯನ್ನು ಸಿಬಿಎಸ್ ನಲ್ಲಿ ನಿರ್ವಹಿಸಲು ಆದ್ಯತೆ ನೀಡಲು ಸೂಚಿಸಿದೆ.

ಉಲ್ಲೇಖ 5 ರ ನಬಾರ್ಡ್ ಸುತ್ತೋಲೆಯಲ್ಲಿ ಕೇಂದ್ರ ಸರ್ಕಾರದ ಶೇ.2 ಬಡ್ಡಿ ಸಬ್ ವೆನ್ಷನ್ ಮತ್ತು ಶೇ.3 ರ ಪ್ರೋತ್ಸಾಹಧನ ಪಡೆಯಲು ಆಧಾರ್ ಪಡೆಯುವುದು ಕಡ್ಡಾಯವಾಗಿದ್ದು, ರಾಜ್ಯ ಸರ್ಕಾರದ ಆದೇಶದಲ್ಲಿಯೂ ಸಹ ಆಧಾರ್ ದೃಢೀಕರಣ ಪಡೆಯಲು ಕಡ್ಡಾಯ ಮಾಡಲಾಗಿದೆ. ಇದಕ್ಕಾಗಿ ಅರ್ಜಿ ನಮೂನೆಯಲ್ಲಿಯೇ ರೈತನ ದೃಢೀಕರಣವನ್ನು ಪಡೆದು ರೈತರ ಖಾತೆಗಳಿಗೆ ಆಧಾರ್ ಲಿಂಕ್ ಮಾಡಲು ಸೂಚಿಸಿದೆ.

ಸರ್ಕಾರದ ಆದೇಶದಲ್ಲಿ ಸಾಲ ಪಡೆದ ರೈತ ಸರ್ಕಾರಿ/ಸರ್ಕಾರಿ ಸಾಮ್ಯದ ಸಂಸ್ಥೆಗಳಲ್ಲಿ ನೌಕರನಾಗಿದ್ದು, ಮಾಸಿಕ ರೂ.20000 ವೇತನ/ಪಿಂಚಣಿ ಪಡೆಯುತ್ತಿರುವ ಅಥವಾ ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿದ್ದರೆ ಅಂತಹ ರೈತರಿಗೆ ಬಡ್ಡಿ ಪ್ರೋತ್ಸಾಹ ಧನ ದೊರೆಯುವುದಿಲ್ಲ. ಇದಕ್ಕಾಗಿ ಅರ್ಜಿ ನಮೂನೆಯಲ್ಲಿಯೇ ರೈತನ ದೃಢೀಕರಣವನ್ನು ಪಡೆಯತಕ್ಕದ್ದು. ಈಗಾಗಲೇ ಸಾಲ ವಿತರಿಸಿದಲ್ಲಿ ಪ್ರತ್ಯೇಕವಾಗಿ ದೃಢೀಕರಣ ಪಡೆಯತಕ್ಕದ್ದು ಎಂದು ತಿಳಿಸಿರುತ್ತದೆ.

ದಿ.1-4-2020 ರಿಂದ ಸಾಲ ವಿತರಣೆ ಅವಧಿ ಆರಂಭವಾಗಿದ್ದು, ಸರ್ಕಾರದ ಆದೇಶದ ಷರತ್ತನ್ನು ಪಾಲಿಸುವ ಸಲುವಾಗಿ ಈ ಪತ್ರಕ್ಕೆ ಲಗತ್ತಿಸಿದ ನಮೂನೆಯಲ್ಲಿ ರೈತರಿಂದ ಆದಾರ್, ಪಡಿತರ ಚೀಟಿ ಮತ್ತು ಆರ್‌ಟಿಸಿ ಗಳೊಂದಿಗೆ ಅರ್ಜಿ/ಸ್ವಯಂ ದೃಢೀಕರಣ ಪಡೆಯತಕ್ಕದ್ದು, ಈಗಾಗಲೇ ಸಾಲ ಮನ್ನಾ ಯೋಜನೆಯಲ್ಲಿ ಸ್ವಯಂ ದೃಢೀಕರಣ ನೀಡಿದ ರೈತರನ್ನು ಹೊರತುಪಡಿಸಿ ಉಳಿದ ರೈತ ಸದಸ್ಯರಿಂದ ಅರ್ಜಿಗಳನ್ನು ಪಡೆಯಬಹುದಾಗಿದೆ. ಸಾಲ ವಿತರಿಸಿದ ಮಾಹಿತಿಯನ್ನು ಮತ್ತು ಸ್ವಯಂ ದೃಢೀಕರಣದ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು/ಕ್ಲೇಮು ಬಿಲ್ಲು ಸಲ್ಲಿಸಲು ತಂತ್ರಾಂಶವನ್ನು ಶೀಘ್ರದಲ್ಲಿಯೇ ಒದಗಿಸಲಾಗುವುದು.

ಸರ್ಕಾರದ ಆದೇಶದಲ್ಲಿ ಒಂದು ಕುಟುಂಬಕ್ಕೆ ಗರಿಷ್ಟ ರೂ.3.00 ಲಕ್ಷಗಳಿಗೆ ನೀಡಿದ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ತಿಳಿಸಿದ್ದು, ಸದರಿ ಷರತ್ತನ್ನು ಪಾಲಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಕುಟುಂಬದ ಸದಸ್ಯರು ಒಟ್ಟಾರೆ ಎಷ್ಟೇ ಸಾಲ ಪಡೆದಿದ್ದರೂ ಯಾವ ಸದಸ್ಯನ ಸಾಲದ ಗಡುವು ಮೊದಲು ಬರುತ್ತದೋ ಅಂತಹ ಸದಸ್ಯರಿಗೆ ಮೊದಲ ಮೂರು ಲಕ್ಷಗಳ ವರೆಗಿನ ಸಾಲಕ್ಕೆ ಮಾತ್ರ ರಾಜ್ಯ ಸರ್ಕಾರದ ಬಡ್ಡಿ ಸಹಾಯಧನ ದೊರೆಯಲಿದೆ. ಉದಾಹರಣೆಗೆ ಮೊದಲನೇ ಸದಸ್ಯರ ಸಾಲ ರೂ.1 ಲಕ್ಷ, (ಮರುಪಾವತಿ ಗಡುವು ಅಕ್ಟೋಬರ್), ಎರಡನೇ ಸದಸ್ಯನ ಸಾಲ ರೂ.1.50 ಲಕ್ಷ, (ಮರುಪಾವತಿ ಗಡುವು ನವೆಂಬರ್) ಮೂರನೇ ಸದಸ್ಯರ ಸಾಲ ರೂ.2 ಲಕ್ಷ(ಮರುಪಾವತಿ ಗಡುವು ಡಿಸೆಂಬರ್) ಇದ್ದರೆ ಮೊದಲ ಎರಡು ಸದಸ್ಯರಿಗೆ ಪೂರ್ಣ ಮೊತ್ತಕ್ಕೆ ಮತ್ತು ಮೂರನೇ ಸದಸ್ಯನಿಗೆ ರೂ.0.50 ಲಕ್ಷಗಳಿಗೆ ಮಾತ್ರ ರಾಜ್ಯ ಸರ್ಕಾರದ ಬಡ್ಡಿ ಸಹಾಯಧನ ಲಭ್ಯವಿದ್ದು, ಉಳಿದ ರೂ.1.50 ಲಕ್ಷಗಳಿಗೆ ಬಡ್ಡಿ ಸಹಾಯಧನ ಲಭ್ಯವಿರುವುದಿಲ್ಲ. ಮೂರನೇ ಸದಸ್ಯ ಸುಸ್ತಿಯಾದರೂ ಸಹ ಮೊದಲು ಎರಡು ಸದಸ್ಯರಿಗೆ ಬಡ್ಡಿ ಸಹಾಯಧನ ಲಭ್ಯವಿರುತ್ತದೆ.

ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಅವಲಂಬಿತ 18 ವರ್ಷದವರೆಗಿನ ಮಕ್ಕಳನ್ನು ಪರಿಗಣಿಸತಕ್ಕದ್ದು ಮತ್ತು ಕುಟುಂಬದ ಸದಸ್ಯರನ್ನು ರೇಷನ್ ಕಾರ್ಡ್ ಆಧಾರವಾಗಿ ಪರಿಗಣಿಸತಕ್ಕದ್ದು, ಇದಕ್ಕಾಗಿ ರೇಷನ್ ಕಾರ್ಡ್ ಹೊಂದಿರುವುದು ಕಡ್ಡಾಯವಾಗಿರುತ್ತದೆ. 2 ಕುಟುಂಬದ ಸದಸ್ಯರು ಒಂದೇ ರೇಷನ್ ಕಾರ್ಡ್ ನಲ್ಲಿದ್ದರೆ ಅವರು ಹೊಸ ರೇಷನ್ ಕಾರ್ಡ್ ಪಡೆಯುವ ವರೆಗೆ ಒಂದೇ ಕುಟುಂಬ ಎಂದು ಪರಿಗಣಿಸತಕ್ಕದ್ದು.

ಸರ್ಕಾರದ ಆದೇಶದಲ್ಲಿ ಸೂಚಿಸಿದಂತೆ ಮೂರು ಹಂತದ ಸಹಕಾರ ಸಂಸ್ಥೆಗಳು ಕೆಳ ಹಂತದ ಸಂಸ್ಥೆಗಳಿಗೆ ಬಡ್ಡಿ ಆಕರಣೆ ಮಾಡತಕ್ಕದ್ದು. ಇದನ್ನು ಪಾಲಿಸದೇ ಇದ್ದಲ್ಲಿ ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಳ ಹಂತದ ಸಂಸ್ಥೆಗಳಿಗಾಗುವ ನಷ್ಟಕ್ಕೆ ಜವಾಬ್ದಾರರಾಗಿರುತ್ತಾರೆ.

ಸರ್ಕಾರದ ಆದೇಶದಲ್ಲಿ ಪ್ಯಾಕ್ಸ್ ಗಳು ರೈತರಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ (ಶೇ.7) ಬಡ್ಡಿ ದರ ಆಕರಿಸಿ ಸಾಲ ವಿತರಿಸತಕ್ಕದ್ದು ಎಂದು ತಿಳಿಸಿದ್ದು, ಈ ಕೆಳಕಂಡ ಲೆಕ್ಕ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದಾಗಿದೆ.

ರಾಜ್ಯ ಸರ್ಕಾರದಿಂದ ಶೇ.5.8 ರ ಬಡ್ಡಿ ಸಹಾಯಧನ ಮತ್ತು ಕೇಂದ್ರ ಸರ್ಕಾರದಿಂದ ಶೇ.3 ರ ಪ್ರೋತ್ಸಾಹಧನ ನೀಡುವುದರಿಂದ ಪ್ಯಾಕ್ಸ್ ಗಳು ರೈತರಿಗೆ ಒಟ್ಟಾರೆ ಶೇ.8.80 ಬಡ್ಡಿ ಆಕರಣೆ ಮಾಡಬೇಕಾಗುತ್ತದೆ. ಆದರೆ ನಬಾರ್ಡ್ (ಮೂರು ಹಂತದ ಸಹಕಾರ ವ್ಯವಸ್ಥೆಯನ್ನು ಪರಿಗಣಿಸದೇ) ರೈತರಿಗೆ ಶೇ.7 ರ ಬಡ್ಡಿ ಆಕರಣೆ ಮಾಡಲು ತಿಳಿಸಿರುವುದರಿಂದ ಗಡುವು ದಿನಾಂಕದ ವರೆಗೆ ಶೇ.8.80 ಬಡ್ಡಿಯನ್ನು

ಆಕರಣೆ ಮಾಡಬಹುದಾಗಿದ್ದು, ರೈತರು ಗಡುವಿನ ದಿನಾಂಕದೊಳಗೆ ಸಾಲ ಮರುಪಾವತಿಸಿದಲ್ಲಿ ರೈತರಿಂದ ಶೇ.7 ಮತ್ತು ರಾಜ್ಯ ಸರ್ಕಾರದಿಂದ ಅಧಿಕವಾಗಿ ನೀಡುವ ಬಡ್ಡಿ ಶೇ.1.8 (ಶೇ.5.8–ಶೇ.4) ನ್ನು ಬಡ್ಡಿ ಖಾತೆಗೆ ಜಮಾ ಪಡೆದು ಈ  ಮೊತ್ತದಲ್ಲಿ ಪ್ಯಾಕ್ಸ್ ಗಳ ಮಾರ್ಜಿನ್ ಶೇ.2.10 ನ್ನು ಉಳಿಸಿಕೊಂಡು 6.70 ನ್ನು ಡಿಸಿಸಿ ಬ್ಯಾಂಕುಗಳಿಗೆ ಪಾವತಿಸುವಂತೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ರೈತರು ನಿಗದಿತ ಗಡುವು ದಿನಾಂಕದೊಳಗೆ ಸಾಲ ಮರುಪಾವತಿಸದೇ ಇದ್ದಲ್ಲಿ, ರೈತನಿಂದ ಗಡುವು ದಿನಾಂಕದವರೆಗೆ ಶೇ.7 ರ ಬಡ್ಡಿಯನ್ನು ಮಾತ್ರ ವಸೂಲು ಮಾಡಬೇಕಿದ್ದು, ಪ್ಯಾಕ್ಸ್‌ಗಳಿಗೆ ಶೇ.1.80 ಬಡ್ಡಿ ನಷ್ಟವಾಗುತ್ತದೆ. ವ್ಯತ್ಯಾಸದ ಮೊತ್ತವನ್ನು ರೈತರು ಸ್ವಯಂ ಪ್ರೇರಣೆಯಿಂದ ಪಾವತಿಸಿದಲ್ಲಿ ಮಾತ್ರ ಬಡ್ಡಿ ವಸೂಲು ಮಾಡಬಹುದಾಗಿದ್ದು, ಒತ್ತಾಯ ಮಾಡತಕ್ಕದ್ದಲ್ಲ.

ಕೇಂದ್ರ ಸರ್ಕಾರ ನೀಡುವ ಶೇ.2 ರ ಬಡ್ಡಿ ಸಬ್‌ವೆಷನ್ ಪ್ಯಾಕ್ಸ್ ಗಳ ಮಟ್ಟದಲ್ಲಿ ದೈನಂದಿನ ಹೊರಬಾಕಿ ಪ್ರಾಡಕ್ಟ್ ಬಿಲ್ಲು ತಯಾರಿಸಬೇಕಿರುವುದರಿಂದ ಡಿಸಿಸಿ ಬ್ಯಾಂಕ್ ಪ್ಯಾಕ್ಸ್ ಗಳಿಗೆ ನೀಡಿದ ದೈನಂದಿನ ಪ್ರಾಡಕ್ಟ್ ಗೆ (ನಬಾರ್ಡ್ ಸಾಲದ ಪ್ರಾಡಕ್ಟ್ ಕಳೆದು) ಮಾತ್ರ ಶೇ.2 ರ ಸಬ್ ವೆಷ್ಷನ್ ಪಡೆದು  ಪ್ಯಾಕ್ಸ್ ಬಂಡವಾಳಕ್ಕೆ ಸಂಬಂಧಿಸಿದ ಶೇ.2 ನ್ನು ಪ್ಯಾಕ್ಸ್ ಗಳಿಗೆ ಪಾವತಿಸತಕ್ಕದ್ದು.

ಡಿಸಿಸಿ ಬ್ಯಾಂಕುಗಳ ಶಾಖೆಯಿಂದ ನೇರವಾಗಿ ವಿತರಿಸಿದಲ್ಲಿ ಶೇ.5.1 ರ ಬಡ್ಡಿ ಆಕರಣೆ  ಮಾಡತಕ್ಕದ್ದು.

ರಾಜ್ಯ ಸರ್ಕಾರದ ಯೋಜನೆಯಲ್ಲಿ ಅರ್ಹ ಇಲ್ಲದೇ ಇರುವ ರೈತರಿಗೆ ಮತ್ತು ಸಾಲದ ಮೊತ್ತಕ್ಕೆ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಬಡ್ಡಿ ಪ್ರೋತ್ಸಾಹಧನ ಮತ್ತು ಸಬ್‌ವೆನ್‌ಷನ್ ಲಭ್ಯವಾಗುವುದರಿಂದ ಅಂತಹ ರೈತರಿಗೆ ಕೇಂದ್ರ ಸರ್ಕಾರದ ಯೋಜನೆಯಂತೆ ಬಡ್ಡಿ ರಿಯಾಯತಿ ಸೌಲಭ್ಯ ಪಡೆಯಬಹುದಾಗಿದೆ.

ತಮ್ಮ ವಿಶ್ವಾಸಿ

(ಎಸ್. ಜಿಯಾಉಲ್ಲಾ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

1. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
   ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.,
2. ವ್ಯವಸ್ಥಾಪಕ ನಿರ್ದೇಶಕರು,
   ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಬೆಂಗಳೂರು
3. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
4. ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
5. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು,
6. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕಿನ ಶಾಖೆಯಲ್ಲಿ/ ಪಿಕಾಡ್ ಬ್ಯಾಂಕ್ ಗಳಲ್ಲಿ ಬೆಳೆ ಸಾಲದ ನವೀಕರಣ/ಹೊಸದಾಗಿ ಸಾಲ ಪಡೆಯಲು ಅರ್ಜಿ ಮತ್ತು ಆಧಾರ್ ಸಮ್ಮತಿ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕ್/ಪಿಕಾಡ್ ಬ್ಯಾಂಕ್ ____, ತಾಲ್ಲೂಕು____, ಜಿಲ್ಲೆ ____

| | | |
|---|---|---|
| 1. | ರೈತನ ಹೆಸರು | |
| 2. | ತಂದೆ/ತಾಯಿ/ಗಂಡನ ಹೆಸರು | |
| 3. | ಆಧಾರ ನಂಬರ್ | |
| 4. | ಆಧಾರ್ ಕಾರ್ಡ್‌ನಲ್ಲಿದಂತೆ ಹೆಸರು | |
| 5. | ಮೊಬೈಲ್ ನಂಬರ್ | 9 1 |
| 6. | ಜಾತಿ(ಟಿಕ್ ಮಾಡುವುದು) | ಪರಿಶಿಷ್ಟಜಾತಿ/ ಪರಿಶಿಷ್ಟವರ್ಗ /ಇತರ ಹಿಂದುಳಿದ ವರ್ಗಗಳು/ ಅಲ್ಪಸಂಖ್ಯಾತರು /ಸಾಮಾನ್ಯ |
| 7. | ಜಾತಿಗೆ ಸಂಬಂಧಿಸಿದ ಆರ್ ಡಿ ಸಂಖ್ಯೆ | |
| 8. | ವಯಸ್ಸು | |
| 9. | ರೈತನ ವರ್ಗೀಕರಣ | ದೊಡ್ಡ / ಮಧ್ಯಮ/ಸಣ್ಣ/ಅತೀ ಸಣ್ಣ |
| 10 | ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉಳಿತಾಯ ಖಾತೆ ನಂಬರ್ | |
| 11 | (ಐಎಫ್‌ಎಸ್ ಸಿಕೋಡ್) IFSC Code | |
| 12 | ಸಂಘದಲ್ಲಿ ಶೇರು ಹೊಂದಿದ್ದರೆ ಅದರ ಸಂಖ್ಯೆ | |
| 13 | ಈಗಾಗಲೇ ಸಂಘದಲ್ಲಿ ಸಾಲ ಪಡೆದಿದ್ದಲ್ಲಿ ಸಾಲದ ಬಾಕಿ | |
| 14 | ಪಡಿತರ ಚೀಟಿ ನಂಬರ್ | |

15. ಪಡಿತರ ಚೀಟಿಯಂತೆ ಕುಟುಂಬದ ಸದಸ್ಯರು

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಕುಟುಂಬದ ಮುಖ್ಯಸ್ಥರೊಂದಿಗೆ ಸಂಬಂಧ | ಸಾಲ ಪಡೆದ ಬ್ಯಾಂಕು/ಸಂಘದ ಹೆಸರು | ಸಾಲದ ವಿಧ (ಬೆಳೆ ಸಾಲ/ ಅವಧಿ ಸಾಲ) | ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಸಾಲದ ಬಾಕಿ |
|---|---|---|---|---|---|
| ಎ | | | | | |
| ಬಿ | | | | | |
| ಸಿ | | | | | |
| ಡಿ | | | | | |
| ಇ | | | | | |

16. ವಿಳಾಸ (ಆಧಾರ್ ಕಾರ್ಡ್ ನಲ್ಲಿರುವಂತೆ)

| | | | |
|---|---|---|---|
| ಎ. ಜಿಲ್ಲೆ | | ಬಿ.ತಾಲ್ಲೂಕು | |
| ಸಿ. ಹೋಬಳಿ | | ಡಿ. ಗ್ರಾಮ | |

17. ರೈತರ ಜಮೀನು ವಿವರಗಳು

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರ್ | ಅಕ್ಷರ ಭಾಗ | ಹಿಸ್ಸಾನಂ. | ಎಕರೆ | ಗುಂಟೆ |
|---|---|---|---|---|---|---|---|---|---|
| ಎ | | | | | | | | | |
| ಬಿ | | | | | | | | | |
| ಸಿ | | | | | | | | | |

18. ಬೆಳೆಯಲು ಉದ್ದೇಶಿಸಿರುವ ಬೆಳೆ ವಿವರ

| ಗ್ರಾಮ | ಜಮೀನು ವಿವರಗಳು | | | ವಿಸ್ತೀರ್ಣ | ಹಿಂದಿನ ವರ್ಷದಲ್ಲಿ ಬೆಳೆದ ಬೆಳೆ | ಈ ವರ್ಷದಲ್ಲಿ ಬೆಳೆಯಲು ಉದ್ದೇಶಿಸಿರುವ ಬೆಳೆ | ಪ್ರತೀ ಎಕರೆಗೆ ಸ್ಕೇಲ್ ಆಫ್ ಫೈನಾನ್ಸ್/ ಸಾಲದ ಮೊತ್ತ | ಅವಶ್ಯವಿರುವ ಸಾಲ ಮೊತ್ತ |
|---|---|---|---|---|---|---|---|---|
| | ಸರ್ವೆ ನಂಬರ್ | ಅಕ್ಷರಭಾಗ | ಹಿಸ್ಸಾ ನಂಬರ್ | | | | | |
| ಎ | | | | | | | | |
| ಬಿ | | | | | | | | |
| ಒಟ್ಟು | | | | | | | | |

19. ಸಾಲ ಪಡೆಯುವ ರೈತ ಸರ್ಕಾರಿ/ಸರ್ಕಾರಿ ಸಾಮ್ಯದ ಸಂಸ್ಥೆಗಳಲ್ಲಿ ವೇತನದಾರರಾಗಿದ್ದಾರೆಯೇ, ಹೌದು/ಇಲ್ಲ

ಹೌದಾಗಿದ್ದರೆ ಮಾಸಿಕ ಒಟ್ಟು ವೇತನ ರೂ.__________ ಸಂಸ್ಥೆಯ ಹೆಸರು__________

20. ಸಾಲ ಪಡೆಯುವ ರೈತ ಪಿಂಚಣಿದಾರರಾಗಿದ್ದಾರೆಯೇ , ಹೌದು/ಇಲ್ಲ

ಹೌದಾಗಿದ್ದರೆ ಮಾಸಿಕ ಒಟ್ಟು ವೇತನ ರೂ.__________ ಸಂಸ್ಥೆಯ ಹೆಸರು__________

21. ಸಾಲ ಪಡೆಯುವ ರೈತ **2017-18, 2018-19** ಮತ್ತು **2019-20** ರಲ್ಲಿ ಆದಾಯ ತೆರಿಗೆ ಪಾವತಿಸಲಾಗಿದೆಯೇ , ಹೌದು/ಇಲ್ಲ

ಹೌದಾಗಿದ್ದರೆ ದಾಯ ತೆರಿಗೆ ಪಾವತಿಸಿದ ಮೊತ್ತ ರೂ.__________ ಪ್ಯಾನ್ ಕಾರ್ಡ್ ಸಂಖ್ಯೆ__________

22. ಆಧಾರ್ ಸಮ್ಮತಿ

ನಾನು, ಈ ಮೂಲಕ, ಬೆಳೆ ಸಾಲ ಮನ್ನಾ ಸೌಲಭ್ಯ ಹಾಗೂ ಕಂದಾಯ ಇಲಾಖೆಯ ಇತರ ಸೇವೆಗಳನ್ನು ಬಳಸಿಕೊಳ್ಳುವುದಕ್ಕಾಗಿ ನನ್ನ ಆಧಾರ ನಂಬರ್ ಮತ್ತು ವಿವರಗಳನ್ನು ಒದಗಿಸಲು ಮತ್ತು ಸದರಿ ಮಾಹಿತಿಯನ್ನು **ಸಹಕಾರ** ಇಲಾಖೆಯಲ್ಲಿ ಸಂಗ್ರಹಿಸಿಡಲು ಭಾರತ ಸರ್ಕಾರದ ವಿಶಿಷ್ಟ ಗುರುತು ಪ್ರಾಧಿಕಾರದ ಮಾರ್ಗಸೂಚಿಗಳನ್ವಯ ಸಮ್ಮತಿಸಿರುತ್ತೇನೆ. ನನಗೆ ಆಧಾರ ನಂಬರ್ ನೀಡದಿರುವ ಪಕ್ಷದಲ್ಲಿ ಪರ್ಯಾಯವಾದ ಗುರುತಿನ ದಾಖಲೆಯನ್ನು ಒದಗಿಸುವ ಹಕ್ಕನ್ನು ಹೊಂದಿರುತ್ತೇನೆಂದು ನಾನು ತಿಳಿದಿರುತ್ತೇನೆ.

23. **ಸಹಕಾರ ಸಂಘ/ಡಿಸಿಸಿ ಬ್ಯಾಂಕು ವಿಧಿಸುವ ಈ ಕೆಳಕಂಡ ಷರತ್ತುಗಳಿಗೆ ನನ್ನ ಒಪ್ಪಿಗೆಯನ್ನು ಸೂಚಿಸಿರುತ್ತೇನೆ.**

1. ಮೇಲೆ ನೀಡಿರುವ ನನ್ನ ಜಮೀನುಗಳ ಕಂದಾಯ ಇಲಾಖೆಯಲ್ಲಿ ನಿರ್ವಹಿಸುವ ಪಹಣಿಯಲ್ಲಿ ಸಂಘ/ಬ್ಯಾಂಕಿನ ಹೆಸರಿನಲ್ಲಿ ಬೋಜಾ ಕೂಡಿಸಲು(charge creation) ನನ್ನ ಒಪ್ಪಿಗೆ ಇರುತ್ತದೆ.
2. ಸಂಘದಲ್ಲಿ ಶೇ.10 ಷೇರು ಮೊತ್ತವನ್ನು ಪಾವತಿಸಲು ಮತ್ತು ಸಂಘದ ಸದಸ್ಯತ್ವ ಪಡೆಯಲು ನನ್ನ ಒಪ್ಪಿಗೆ ಇರುತ್ತದೆ.
3. ತೋಟಗಾರಿಕೆ ಬೆಳೆ ಹೊರತುಪಡಿಸಿ ಇತರ ಬೆಳೆಗಳಿಗೆ ಬಿತ್ತನೆ ಮಾಡಿದ ಕೂಡಲೇ ಬೆಳೆ ವಿವರವನ್ನು ಸಂಘಕ್ಕೆ ನೀಡಲು ಒಪ್ಪಿರುತ್ತೇನೆ. ವಿಮೆ ಪ್ರೀಮಿಯಂ ನ್ನು ನನ್ನ ಸಾಲದ ಖಾತೆಗೆ ಖರ್ಚು ಹಾಕಿ ಬೆಳೆ ವಿಮೆ ಸಂಸ್ಥೆಗೆ ಪಾವತಿಸಲು ಮತ್ತು ವ್ಯಯಕ್ತಿಕ ಅಪಘಾತ ವಿಮೆಯನ್ನು ಖರ್ಚು ಹಾಕಿ ಪಾವತಿಸಲು ಒಪ್ಪಿಗೆ ಸೂಚಿಸಿರುತ್ತೇನೆ/ಸೂಚಿಸಿರುವುದಿಲ್ಲ. ಬಹು ವಾರ್ಷಿಕಬೆಳೆಗಳಿಗೆ

ಪಹಣಿಯಲ್ಲಿರುವ ಬೆಳಗೆ ವಿಮೆ ಪ್ರೀಮಿಯಂನ್ನು ಸಾಲದ ಖಾತೆಗೆ ಖರ್ಚು ಹಾಕಿ ವಿಮಾ ಸಂಸ್ಥೆಗೆ ಪಾವತಿಸಲು ಒಪ್ಪಿಗೆ ಸೂಚಿಸಿರುತ್ತೇನೆ/ಸೂಚಿಸಿರುವುದಿಲ್ಲ. ನಾನು ಇದುವರಗೆ ಸಾಲಗಾರನಲ್ಲದ ವರ್ಗದಲ್ಲಿ ಬೆಳೆ ವಿಮೆ ಪ್ರೀಮಿಯಂ ಪಾವತಿಸಿರುವುದಿಲ್ಲ ಎಂದು ಧೃಡೀಕರಿಸಿರುತ್ತೇನೆ.

4. ನಾನು ಸಾಲವನ್ನು ಗರಿಷ್ಠ ಒಂದು ವರ್ಷ ಅಥವಾ ಸಂಘವು ನಿಗದಿಪಡಿಸಿದ ಗಡುವಿನ ದಿನಾಕದೊಳಗೆ ಸಾಲವನ್ನು ಪಾವತಿಸಲು ಬದ್ಧನಾಗಿರುತ್ತೇನೆ.
5. ಕೇಂದ್ರ/ರಾಜ್ಯ ಸರ್ಕಾರ/ ಸಂಘವು ವಿಧಿಸುವ ಬಡ್ಡಿ ದರದಲ್ಲಿ ಅಸಲನ್ನು ಮರು ಪಾವತಿಸಲು ಬದ್ಧನಾಗಿರುತ್ತೇನೆ.
6. ನಾನು ಗಡುವಿನ ದಿನಾಂಕದೊಳಗೆ ಸಾಲವನ್ನು ಮರುಪಾವತಿಸದೇ ಇದ್ದರೆ ನನ್ನ ಉಳಿತಾಯ ಖಾತೆಗೆ/ಸಾಲದ ಖಾತೆಗೆ ಜಮಾ ಆಗುವ ಬೆಳೆ ವಿಮೆ ಪರಿಹಾರವನ್ನು ಸಾಲಕ್ಕೆ ಜಮಾ ಪಡೆಯಲು ಒಪ್ಪಿಗೆ ಸೂಚಿಸಿರುತ್ತೇನೆ.
7. ಡಿಸಿಸಿ ಬ್ಯಾಂಕಿನಲ್ಲಿ ನನ್ನ ಉಳಿತಾಯ ಖಾತೆಯನ್ನು ತೆರೆದು ಸಾಲದ ಮೊತ್ತವನ್ನು ಉಳಿತಾಯ ಖಾತೆಗೆ ಜಮಾ ನೀಡಲು ನನ್ನ ಒಪ್ಪಿಗೆ ಇರುತ್ತದೆ.

24. ಘೋಷಣೆ

ಈ ಮೇಲೆ ನಾನು ಒದಗಿಸಿರುವ ವಿವರಗಳು ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.ರಾಜ್ಯ/ಕೇಂದ್ರ ಸರ್ಕಾರದ ಬಡ್ಡಿ ಸಹಾಯಧನ ಸೌಕರ್ಯವನ್ನು ಕ್ಲೈ ಮಾಡುವುದಕ್ಕಾಗಿ ಒದಗಿಸಿರುವ ಯಾವುದಾದರೂ ಮಾಹಿತಿಯು ಅಸತ್ಯವೆಂದು ಕಂಡು ಬಂದಲ್ಲಿ ರಾಜ್ಯ ಸರ್ಕಾರವು ಸೂಕ್ತ ಕಾನೂನಿನಂತೆ ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ:

ದಿನಾಂಕ: ರೈತನ ಹೆಸರು ಮತ್ತು ಸಹಿ/ಹೆಬ್ಬೆರಳು.

## ಸಂಘದ ಷರಾ;

ಶ್ರೀ _____ ತಂ/ಗಂ___ ರವರಿಗೆ ಸಂಘದ ಬಂಡವಾಳದ ಲಭ್ಯತೆ ಮತ್ತು ಸ್ಕೇಲ್ ಆಫ್ ಫೈನಾನ್ಸ್ ಆಧರಿಸಿ ಪ್ರಾರಂಭದಲ್ಲಿ ರೂ___ ಗಳ ಬೆಳೆ ಸಾಲವನ್ನು ಮಂಜೂರು ಮಾಡಿದ್ದು, ಈ ಸಾಲವನ್ನು _____ ದಿನಾಂಕದೊಳಗಾಗಿ ಶೇ. 7 ಬಡ್ಡಿ ದರದಲ್ಲಿ ಮರುಪಾವತಿಸಲು ಸೂಚಿಸಿದೆ. ಈ ದಿನಾಂಕದೊಳಗೆ ಸಾಲ ಮರುಪಾವತಿಸಿದಲ್ಲಿ ಕೇಂದ್ರ ಸರ್ಕಾರದಿಂದ ಶೇ.3 ಮತ್ತು ರಾಜ್ಯ ಸರ್ಕಾರದಿಂದ ಶೇ.4 ರ ಬಡ್ಡಿಯನ್ನು ತಮ್ಮ ಖಾತೆಗೆ ಜಮಾ ನೀಡಲಾಗುವುದು.

**ಸಂಘದ ಕಾರ್ಯದರ್ಶಿಯ ಹೆಸರು ಮತ್ತು ಸಹಿ**

## ಮಂಜೂರಾದ ಸಾಲದ ಮೊತ್ತಕ್ಕೆ ಒಪ್ಪಿಗೆ

ನನಗೆ ಸಂಘ/ಬ್ಯಾಂಕ್ ಬೆಳೆ ಸಾಲದ ಉದ್ದೇಶಕ್ಕಾಗಿ ಮಂಜೂರು ಮಾಡಿರುವ ರೂ.___ ಗಳಿಗೆ ನನ್ನ ಒಪ್ಪಿಗೆ ಇದ್ದು, ನನ್ನ ಪಹಣಿಗಳಲ್ಲಿ ಸಂಘದ ಹೆಸರಿನಲ್ಲಿ ಬೋಜಾ ಕೂಡಿಸಲು, ಬೆಳೆ ವಿಮೆ ಮತ್ತು ವ್ಯಯಕ್ತಿಕ ಅಪಘಾತ ವಿಮೆಯನ್ನು ಪಾವತಿಸಲು/ಪಾವತಿಸದೇ ಇರಲು ಮತ್ತು ಸಾಲದ ಮೊತ್ತವನ್ನು ಡಿಸಿಸಿ ಬ್ಯಾಂಕಿನಲ್ಲಿರುವ ನನ್ನ ಉಳಿತಾಯ ಖಾತೆಗೆ ಜಮಾ ನೀಡಲು ಒಪ್ಪಿಗೆ ಸೂಚಿಸಿರುತ್ತೇನೆ.

ಸ್ಥಳ: ರೈತನ ಸಹಿ/ ಹೆಬ್ಬೆರಳು

ದಿನಾಂಕ:

